**ಕರ್ನಾಟಕ ವಿಧಾನ ಪರಿಷತ್**

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಪುಟ್ಟಣ್ಣ ರವರು ನಿಯಮ 72 ರಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ವಿಷಯ:**

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲು ಹಾಗೂ ಇಲಾಖೆಯಲ್ಲಿ ಕಾರ್ಯದಕ್ಷತೆ ಹೆಚ್ಚಿಸುವ ಉದ್ದೇಶದಿಂದ 15 ಜಿಲ್ಲಾ ಅಧಿಕಾರಿಗಳ (ಗ್ರೇಡ್-1) ಹುದ್ದೆಗೆ ದಿನಾಂಕ:13-01-2023 ರಂದು ಇಲಾಖಾ ಮುಂಬಡ್ತಿ ಸಮಿತಿಯ ಸಭೆ ನಡೆಸಿ ಮುಂಬಡ್ತಿ ನೀಡಲು ಸಭೆ ನಿರ್ಣಯ ಕೈಗೊಂಡಿರುತ್ತದೆ. ಆದರೆ, ಇಲ್ಲಿಯವರೆಗೆ ಮುಂಬಡ್ತಿ ಆದೇಶ ಹೊರಡಿಸಿರುವುದಿಲ್ಲ. ಈ ವಿಷಯದ ಕುರಿತು ಸಂಪೂರ್ಣ ಮಾಹಿತಿಯನ್ನು ನೀಡಬೇಕೆಂದು ಕೋರುತ್ತಾ, ಸದರಿ ವಿಷಯವನ್ನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

---

**ಉತ್ತರ:**

ಸರ್ಕಾರದ ಆದೇಶ ಸಂಖ್ಯೆ:MWD 445 MDS 2021 ದಿನಾಂಕ:02.07.2022ರಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿನ ಅಲ್ಪಸಂಖ್ಯಾತರ ನಿರ್ದೇಶನಾಲಯದ 15 ಜಿಲ್ಲಾ ಅಧಿಕಾರಿಗಳ ಗ್ರೂಪ್-ಬಿ ವೃಂದದ (ವೇತನ ಶ್ರೇಣಿ: ರೂ.43100-83900/-) ಹುದ್ದೆಗಳನ್ನು ಗ್ರೂಪ್-ಎ ವೃಂದಕ್ಕೆ (ವೇತನ ಶ್ರೇಣಿ: ರೂ.52,650-97,100/-) ಉನ್ನತೀಕರಿಸಿ ಆದೇಶಿಸಲಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: MWD 445 MDS 2021 (ಭಾ) ದಿನಾಂಕ:06.09.2022ರಲ್ಲಿ ಉನ್ನತೀಕರಿಸಲಾಗಿರುವ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದಲ್ಲಿನ ಅಲ್ಪಸಂಖ್ಯಾತರ ನಿರ್ದೇಶನಾಲಯದ ಗ್ರೂಪ್-ಎ ವೃಂದದ (ವೇತನ ಶ್ರೇಣಿ: ರೂ.52,650-97,100/-) 15 ಜಿಲ್ಲಾ ಅಧಿಕಾರಿಗಳ ಹುದ್ದೆಗಳನ್ನು ಅತ್ಯಧಿಕ ಅಲ್ಪಸಂಖ್ಯಾತರ ಜನಸಂಖ್ಯೆ ಹೊಂದಿರುವ ಜಿಲ್ಲೆಗಳಿಗೆ ಹಂಚಿಕೆ ಮಾಡಿ ಆದೇಶಿಸಲಾಗಿರುತ್ತದೆ.

ಉನ್ನತೀಕರಿಸಲಾದ ಗ್ರೂಪ-ಎ ವೃಂದದ (ವೇತನ ಶ್ರೇಣಿ: ರೂ.52,650-97,100) 15 ಜಿಲ್ಲಾ ಅಧಿಕಾರಿಗಳ ಹುದ್ದೆಗಳನ್ನು ಗ್ರೂಪ್-ಬಿ ವೃಂದದ ಜಿಲ್ಲಾ ಅಧಿಕಾರಿಗಳ ವೃಂದದಿಂದ ಮುಂಬಡ್ತಿ ಮೂಲಕ ಭರ್ತಿ ಮಾಡಲು ಸರ್ಕಾರದ ಆದೇಶ ಸಂಖ್ಯೆ: MWD 322 MDS 2022 ದಿನಾಂಕ:13.01.2023 ರಲ್ಲಿ ಕಾರ್ಯಕಾರಿ ಆದೇಶವನ್ನು ಹೊರಡಿಸಲಾಗಿರುತ್ತದೆ.

ಅದರಂತೆ, ಗ್ರೂಪ್-ಎ ವೃಂದದ 15 ಜಿಲ್ಲಾ ಅಧಿಕಾರಿಗಳ ಹುದ್ದೆಗಳನ್ನು ಗ್ರೂಪ್-ಬಿ ವೃಂದದ ಜಿಲ್ಲಾ ಅಧಿಕಾರಿಗಳ ವೃಂದದಿಂದ ಮುಂಬಡ್ತಿ ಮೂಲಕ ಭರ್ತಿ ಮಾಡುವ ಬಗ್ಗೆ ದಿ:13.01.2023 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿಯ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಇಲಾಖಾ ಮುಂಬಡ್ತಿ ಸಮಿತಿಯು ತೀರ್ಮಾನಿಸಿರುವಂತೆ ಮುಂಬಡ್ತಿ ನೀಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

**ಸಂಖ್ಯೆ: MWD 42 LMQ 2023**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ